ICAR–NBAIR, Bengaluru Streams of 24th instalment of PM-KISAN event and Distributes Biocontrol Inputs under the Development Action Plan for Scheduled Castes

ICAR–NBAIR, Bengaluru | October 30, 2026

ICAR–NBAIR, Bengaluru organized the live webcast of the ‘Pradhan Mantri Kisan Samman Nidhi (PM-KISAN)’ programme addressed by the Honourable Prime Minister, Shri Narendra Modi Ji, for the benefit of farmers particularly Small and Marginal Farmers (SMFs) on October 30, 2026, at ICAR-NBAIR, Yelahanka campus. The event was graced by **Dr. Y.N. Shivalingaiah** Hon’ble Dean (Agri.), University of Agricultural Sciences, GKVK, Bengaluru, as the Chief Guest, in the presence of Dr. T. Venkatesan, Director, ICAR–NBAIR. In his opening remarks Dr. T. Venkatesan briefed the dignitaries and participants about the various activities of ICAR-NBAIR and the role of the institute in supporting farmers by the development of various biological control technologies for the successful pest management. He advocated the farmers for the adoption of eco-friendly methods to restore the soil health and created awareness about the need for sustainable agriculture.

Chief Guest **Dr. Y.N. Shivalingaiah** highlighted the importance of PM-KISAN flagship programme, wherein Hon’ble Prime Minister Shri Narendra Modi Ji released the 24th instalment of ₹18,690.32 crore Samman Rashi directly to the bank accounts of more than 9.34 crore eligible farmers via Direct Benefit Transfer (DBT) from Banaskantha, Gujarat. He stated that the Hon’ble Prime Minister Shri Narendra Modi ji is keen to improve the prosperity of farmers in our country. In his address, he emphasised the importance of crop rotation, integrated nutrient and pest management. He advised farmers to use biocontrol agents and bio-rational technologies for the successful management for pest and disease management for sustainable agriculture.

The virtual event marking the release of the 24th instalment of the PM-KISAN Scheme by the Prime Minister was witnessed by 150 people including 113 farmers, besides students and researchers. As part of the programme, biocontrol inputs were distributed to farmers from Kolar District of Karnataka under the Development Action Plan for Scheduled Castes (DAPSC).

ಬೆಂಗಳೂರಿನ ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋದಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ೨೪ನೇ ಕಂತಿನ ಬಿಡುಗಡೆ ಕಾರ್ಯಕ್ರಮದ ನೇರ ಪ್ರಸಾರ ಹಾಗೂ ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಕ್ರಿಯಾ ಯೋಜನೆಯಡಿ ಜೈವಿಕ ನಿಯಂತ್ರಣ ಪರಿಕರಗಳ ವಿತರಣೆ

ಬೆಂಗಳೂರು | ಅಕ್ಟೋಬರ್ ೩೦ ೨೦೨೬

ಬೆಂಗಳೂರಿನ ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ ವತಿಯಿಂದ ಅಕ್ಟೋಬರ್ 30, 2026 ರಂದು ಯಲಹಂಕದಲ್ಲಿರುವ ಸಂಸ್ಥೆಯ ಆವರಣದಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 24ನೇ ಕಂತಿನ ಬಿಡುಗಡೆ ಕಾರ್ಯಕ್ರಮದ ನೇರ ಪ್ರಸಾರವನ್ನು ಆಯೋಜಿಸಲಾಗಿತ್ತು. ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಗುಜರಾತ್‌ನ ಬನಸ್ಕಾಂತದಿಂದ ಉದ್ದೇಶಿಸಿ ಮಾತನಾಡಿದ ಈ ಕಾರ್ಯಕ್ರಮವು ದೇಶದ ರೈತರ, ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರ ಆರ್ಥಿಕ ಸಬಲೀಕರಣ ಹಾಗೂ ಕಲ್ಯಾಣವನ್ನು ಉತ್ತೇಜಿಸುವ ಮಹತ್ವದ ಉದ್ದೇಶವನ್ನು ಹೊಂದಿತ್ತು.

ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋದ ನಿರ್ದೇಶಕರಾದ ಡಾ. ಟಿ. ವೆಂಕಟೇಶನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಡೀನ್ (ಕೃಷಿ) ಡಾ. ವೈ.ಎನ್. ಶಿವಲಿಂಗಯ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಆರಂಭಿಕ ನುಡಿಗಳಲ್ಲಿ ಡಾ. ಟಿ. ವೆಂಕಟೇಶನ್ ಅವರು ಸಂಸ್ಥೆಯ ಪ್ರಮುಖ ಸಂಶೋಧನಾ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಪರಿಚಯಿಸಿದರು. ಕೀಟಗಳ ಸುಸ್ಥಿರ ನಿರ್ವಹಣೆಗಾಗಿ ಪರಿಸರ ಸ್ನೇಹಿ ಜೈವಿಕ ನಿಯಂತ್ರಣ ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಅವುಗಳನ್ನು ರೈತರಿಗೆ ತಲುಪಿಸುವಲ್ಲಿ ಸಂಸ್ಥೆಯು ವಹಿಸುತ್ತಿರುವ ಪಾತ್ರವನ್ನು ವಿವರಿಸಿದರು. ಮಣ್ಣಿನ ಆರೋಗ್ಯ ಸಂರಕ್ಷಣೆ ಮತ್ತು ಪುನರುಜ್ಜೀವನಕ್ಕಾಗಿ ಪರಿಸರ ಸ್ನೇಹಿ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವಂತೆ ರೈತರಿಗೆ ಕರೆ ನೀಡಿದ ಅವರು, ದೀರ್ಘಕಾಲೀನ ಕೃಷಿ ಸುಸ್ಥಿರತೆಯಲ್ಲಿ ಇಂತಹ ತಂತ್ರಜ್ಞಾನಗಳ ಮಹತ್ವವನ್ನು ವಿವರಿಸಿದರು.

ಮುಖ್ಯ ಅತಿಥಿಗಳಾದ ಡಾ. ವೈ.ಎನ್. ಶಿವಲಿಂಗಯ್ಯ ಅವರು ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಮಹತ್ವವನ್ನು ವಿವರಿಸಿದರು. ಈ ಯೋಜನೆಯಡಿ ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಗುಜರಾತ್‌ನ ಬನಸ್ಕಾಂತದಿಂದ ದೇಶದ 9.34 ಕೋಟಿಗೂ ಅಧಿಕ ಅರ್ಹ ರೈತರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮೂಲಕ 24ನೇ ಕಂತಿನ ಒಟ್ಟು ₹18,690.32 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿದರು. ರೈತರ ಆರ್ಥಿಕ ಭದ್ರತೆ ಮತ್ತು ಸಮೃದ್ಧಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರಧಾನಮಂತ್ರಿಯವರು ವಿಶೇಷ ಕಾಳಜಿ ವಹಿಸುತ್ತಿರುವುದನ್ನು ಅವರು ಪ್ರಶಂಸಿಸಿದರು.

ತಮ್ಮ ಭಾಷಣದಲ್ಲಿ ಅವರು ಸುಸ್ಥಿರ ಕೃಷಿ ಉತ್ಪಾದನೆಗಾಗಿ ಬೆಳೆ ಪರಿವರ್ತನೆ, ಸಮಗ್ರ ಪೋಷಕಾಂಶ ಮತ್ತು ಕೀಟ ನಿರ್ವಹಣೆ ನಿರ್ವಹಣೆ ಪದ್ಧತಿಗಳ ಅಳವಡಿಕೆಯ ಅಗತ್ಯವನ್ನು ವಿವರಿಸಿದರು. ಕೀಟ ಮತ್ತು ರೋಗಗಳ ಪರಿಣಾಮಕಾರಿ ನಿರ್ವಹಣೆಗಾಗಿ ರಾಸಾಯನಿಕ ಕೀಟನಾಶಕಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಜೈವಿಕ ನಿಯಂತ್ರಣ ಪದ್ಧತಿಗಳು ಹಾಗೂ ಜೈವಿಕ-ತರ್ಕಬದ್ಧ ನಿರ್ವಹಣಾ ತಂತ್ರಜ್ಞಾನಗಳನ್ನು ಬಳಸುವಂತೆ ರೈತರಿಗೆ ಸಲಹೆ ನೀಡಿದರು. ಈ ನಿಟ್ಟಿನಲ್ಲಿ ಸಂಶೋಧನೆ ಕೈಗೊಳ್ಳುತ್ತಿರುವ ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲ ಸಂಸ್ಥೆಯ ವಿಜ್ಞಾನಿಗಳ ಕಾರ್ಯ ವೈಖರಿಯನ್ನುಶ್ಲಾಘಿಸಿದರು.

ಪ್ರಧಾನಮಂತ್ರಿಯವರು ಪಿಎಂ-ಕಿಸಾನ್ ಯೋಜನೆಯ 24ನೇ ಕಂತನ್ನು ಬಿಡುಗಡೆ ಮಾಡಿದ ಕಾರ್ಯಕ್ರಮದ ನೇರ ಪ್ರಸಾರವನ್ನು ವಿದ್ಯಾರ್ಥಿಗಳು, ಸಂಶೋಧಕರು ಹಾಗೂ 113 ರೈತರು ಸೇರಿದಂತೆ ಒಟ್ಟು 150 ಮಂದಿ ವೀಕ್ಷಿಸಿದರು. ಕಾರ್ಯಕ್ರಮದ ಮತ್ತೊಂದು ಪ್ರಮುಖ ಅಂಗವಾಗಿ, ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಕ್ರಿಯಾ ಯೋಜನೆ ಅಡಿಯಲ್ಲಿ ಕರ್ನಾಟಕದ ಕೋಲಾರ ಜಿಲ್ಲೆಯ ಪರಿಶಿಷ್ಟ ಜಾತಿಗೆ ಸೇರಿದ ರೈತರಿಗೆ ಜೈವಿಕ ನಿಯಂತ್ರಣ ಪರಿಕರಗಳನ್ನು ವಿತರಿಸಲಾಯಿತು.